ಚಾಮುಂಡೇಶ್ವರಿ ವಿದ್ಯುತ್‌ಸರಬರಾಜು ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಅಧೀಕ್ಷಕ ಇಂಜಿನಿಯರ್ (ವಿ), ರವರಕಛೇರಿ,
ಕಾ ಮತ್ತು ಪಾ ವೃತ್ತ, ಚಾ.ನಗರ – ಕೊಡಗು,
ಶ್ರೀ ಹರ್ಷರಸ್ತೆ, ಮೈಸೂರು.
ದೂರವಾಣಿ: 0821-2420850

CHAMUNDESHWARI ELECTRICITY SUPPLY CORPORATION LIMITED
*(A Government of Karnataka Undertaking)*
O&M Circle, Chamarajanagar-Kodagu,
MPL Compound, Sri Harsha Road,
Mysuru-570001.
Web site: www.cescmysore.org
E-mail ID: seechnkodagu@cescmysore.org

Company Identity Number (CIN):U40109KA2004SGC035177

ಸಂಖ್ಯೆ: ಅಇಂ(ವಿ)/ಕಾನಿಇಂ/ಸಕಾನಿಇಂ/ಕ-127/2023-24/ CYS-97 ದಿನಾಂಕ: 11.10.2023

## ಜನ ಸಂಪರ್ಕ ಸಭೆಯ ನಡಾವಳಿ

ದಿನಾಂಕ:30.09.2023 ರಂದು ವಿರಾಜಪೇಟೆ ಉಪವಿಭಾಗ ಕಛೇರಿಯಲ್ಲಿ ಅಧೀಕ್ಷಕ ಇಂಜಿನಿಯರ್(ವಿ) ರವರ ಅಧ್ಯಕ್ಷತೆಯಲ್ಲಿ ನಡೆದ ಜನ ಸಂಪರ್ಕ ನಡಾವಳಿಗಳು.

ಸಭೆಯಲ್ಲಿ ಹಾಜರಿದ್ದವರು:-

1. ಶ್ರೀ.ಸೋಮಶೇಖರ್.ಎಂ.ಕೆ : ಅಧೀಕ್ಷಕ ಚಾಮರಾಜನಗರ ಇಂಜಿನಿಯರ್ (ವಿ),ಚಾ.ನಗರ-ಕೊಡಗು ವೃತ್ತ ಮೈಸೂರು
2. ಶ್ರೀಮತಿ.ಅನಿತಾ ಬಾಯಿ : ಕಾರ್ಯ ನಿರ್ವಾಹಕ ಇಂಜಿನಿಯರ್ (ವಿ), ಮಡಿಕೇರಿ ವಿಭಾಗ.
3. ಶ್ರೀ. ಪಿ.ಎಸ್.ಸುರೇಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿರಾಜಪೇಟೆ
4. ಶ್ರೀ ಸೋಮೇಶ್.ಕೆ.ವಿ : ಪ್ರಭಾರ ಸಹಾಯಕ ಇಂಜಿನಿಯರ್(ತಾ),(ಪ್ರಭಾರ) ವಿರಾಜಪೇಟೆ
5. ಶ್ರೀ.ಜಗದೀಶ್ : ಪ್ರಭಾರ ಹಿರಿಯ ಸಹಾಯಕರು, ಕಂದಾಯ ಶಾಖೆ, ಸೆಸ್ಕ್, ವಿರಾಜಪೇಟೆ.

ಸಹಾಯಕ ಇಂಜಿನಿಯರ್(ತಾಂ) ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನೂ ಸ್ವಾಗತಿಸಿ ಅಧೀಕ್ಷಕ ಇಂಜಿನಿಯರ್ (ವಿ) ರವರಾದ ಶ್ರೀ.ಎಂ.ಕೆ.ಸೋಮಶೇಖರವರನ್ನು ಸಭೆಯ ಅಧ್ಯಕ್ಷತೆಯನ್ನು ವಹಿಸಿಕೊಳ್ಳುವಂತೆ ವಿನಂತಿಸಿಕೊಂಡರು.

ಸಭೆಯಲ್ಲಿ ಹಾಜರಿದ್ದ ಗ್ರಾಹಕರ ಕುಂದುಕೊರತೆಗಳನ್ನು ಆಲಿಸಿ ಈ ಕೆಳಕಂಡಂತೆ ಸಲಹೆ ಸೂಚನೆಗಳನ್ನು ನೀಡಿದರು.

| ಕ್ರ.ಸಂ | ಸಲಹೆ/ದೂರು ಗಳನ್ನು ನೀಡಿದ ಸದಸ್ಯರ ಹೆಸರು ಮತ್ತು ವಿಳಾಸ | ಸಲಹೆ/ದೂರುಗಳ ವಿವರ | ಅನುಸರಣೆ |
|---|---|---|---|
| 1 | ಶ್ರೀ.ಕೆ.ಟಿ.ಸೋಮಯ್ಯ ರುದ್ರಗುಪ್ಪೆ ಗ್ರಾಮ ದೂ: 9845777408 | • ರುದ್ರಗುಪ್ಪೆ ಗ್ರಾಮದ 63 ಕೆ.ವಿ.ಎ ಕಾಳಪ್ಪ ಪರಿವರ್ತಕದ ಲೋಡ್ ಅಧಿಕವಾಗಿದ್ದು ಅದಕ್ಕೆ ಸಂಭಂಧಪಟ್ಟಂತೆ ಹೊಸದಾಗಿ 25 ಕೆ.ವಿ.ಎ ಅಂದಾಜುಪಟ್ಟಿಯನ್ನು ಸಲ್ಲಿಸಿದ್ದು ಈವರಗೆ ಅನುಮೋದನೆ ದೊರೆತಿರುವುದಿಲ್ಲ ಆದುದರಿಂದ ಕೂಡಲೇ ಹೊಸ ಪರಿವರ್ತಕ ಅಳವಡಿಸಲು ಅನುಮೋದನೆ ನೀಡುವಂತೆ ಕೋರಿದರು. | • ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ನಿಗಮದ ನಿಯಮಾನುಸಾರ ಕೂಡಲೇ ಅನುಮೋದನೆ ನೀಡುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 2 | ಶ್ರೀ.ಕೆ.ಯು.ಚೀಯಣ್ಣ ರುದ್ರಗುಪ್ಪೆ ಗ್ರಾಮ ದೂ.9481309620 | • ರುದ್ರರಗುಪ್ಪೆ ಗ್ರಾಮದ ಕಾಳಪ್ಪ ಪರಿವರ್ತಕದ ಎಲ್.ಟಿ ಮಾರ್ಗದಲ್ಲಿ (ಜೋಡು ಭಗವತಿ ದೇವಸ್ಥಾನದ ಹತ್ತಿರ) ವಿದ್ಯುತ್ ತಂತಿಗಳು ಜೋತು ಬಿದ್ದಿದ್ದು ಮಧ್ಯಂತರ ಕಂಬಗಳನ್ನು ಅಳವಡಿಸಬೇಕಾಗಿಯು ಹಾಗೂ ಪರಿವರ್ತಕದ ಕೇಬಲ್ ಮತ್ತು ಫ್ಯೂಸ್ ಕ್ಯಾರಿಯರ್ ಸುಟ್ಟು ಹೋಗಿದ್ದು ಬದಲಿಸುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಆನೆ ಕಾರಿಡಾರ್ ಯೋಜನೆಯಡಿ ಮಧ್ಯಂತರ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು ಹಾಗೂ ಕೂಡಲೇ ಸದರಿ ಪರಿವರ್ತಕದ ಕೇಬಲ್ ಮತ್ತು ಎಲ್.ಟಿ ಕಿಟ್ ಅನ್ನು ಬದಲಿಸಲು ಅಂದಾಜು ಪಟ್ಟಿ ಸಲ್ಲಿಸುವಂತೆ ಸೂಚಿಸಿದರಿ. |

| | | | |
|---|---|---|---|
| 3 | ಶ್ರೀ.ಡಾ:ಬಾನಂಡ ಮಂದಣ್ಣ<br>ಬಿ.ಶೆಟ್ಟಿಗೇರಿ<br>ದೂ.9448798401 | • ಸದರಿಯವರ ಮನೆಗೆ ಬರುವ ಎಲ್.ಟಿ ಮಾರ್ಗವು ಕಾಫಿ ತೋಟದ ಮಧ್ಯ ಭಾಗದಲ್ಲಿದ್ದು ರಸ್ತೆ ಬದಿಗೆ ಸ್ಥಳಾಂತರಿಸುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 4 | ಶ್ರೀ.ಹನೀಫ್<br>ಗ್ರಾಮ ಪಂಚಾಯ್ತಿ ಸದಸ್ಯರು,<br>ಹಾಲುಗುಂದ<br>ದೂ.9980380088 | • ಕೊಂಡಂಗೇರಿ ಗ್ರಾಮ ವ್ಯಾಪ್ತಿಯಲ್ಲಿನ ಪರಿವರ್ತಕವು ಅಧಿಕ ಲೋಡ್ ಇರುವುದರಿಂದ ವೋಲ್ಟೇಜ್ ಸಮಸ್ಯೆಯಿಂದ ವಿದ್ಯುತ್ ಮೋಟರ್‌ಗಳು ಚಾಲನೆಗೊಳ್ಳುತ್ತಿಲ್ಲವಾದುದರಿಂದ ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು.. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಂದಾಜು ಪಟ್ಟಿ ಸಲ್ಲಿಸುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 5 | ಶ್ರೀ.ಎಂ.ಎ.ಕಾವೇರಪ್ಪ<br>ಐಮಂಗಲ ಗ್ರಾಮ<br>ದೂ:9686013774 | • ಐಮಂಗಲ ಗ್ರಾಮದ ಸರ್ವೆ ನಂ.102 ರಲ್ಲಿ ಕಂಬವು ವಾಲಿದ್ದು ಸರಿಪಡಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಕೂಡಲೇ ಸ್ಥಳ ಪರಿಶೀಲನೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವಂತೆ ಸೂಚಿಸಿದರು. |
| 6 | ಶ್ರೀ.ಸಿ.ಜೆ.ಸುರೇಶ್<br>ವಿಜಯನಗರ,<br>ವಿರಾಜಪೇಟೆ<br>ದೂ:9482198218 | • ಸದರಿಯವರ ಆರ್.ಆರ್.ಸಂಖ್ಯೆ:45339 ಗೃಹಜ್ಯೋತಿ ಯೋಜನೆಯಲ್ಲಿ ಸರಾಸರಿ ಯುನಿಟ್ ತಪ್ಪಾಗಿದ್ದು ಸರಿಪಡಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಹಿರಿಯ ಸಹಾಯಕರಿಗೆ ಸೂಚಿಸಿದರು. |
| 7 | ಶ್ರೀ.ಎಂ.ಸಿ.ಮಂದಣ್ಣ<br>ಬಿಳುಗುಂದ ಗ್ರಾಮ<br>ದೂ:9481058037 | • ಸದರಿಯವರ ಆರ್.ಆರ್.ಸಂಖ್ಯೆ:BLAEH-32 ಗೃಹಜ್ಯೋತಿ ಯೋಜೆಯಲ್ಲಿ ಸರಾಸರಿ ಯುನಿಟ್ ತಪ್ಪಾಗಿದ್ದು ಸರಿಪಡಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಕೂಡಲೇ ಅಗತ್ಯ ಕ್ರಮ ಕೈಗೊಳ್ಳುವಂತೆ ಹಿರಿಯ ಸಹಾಯಕರಿಗೆ ಸೂಚಿಸಿದರು. |
| 8 | ರಾಜು ಮತ್ತು ಗ್ರಾಮಸ್ಥರು<br>ಚೆನ್ನಂಗಿ ಗ್ರಾಮ<br>ದೂ॥7349454774 | • ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ನೀಡದೆ ಬಿಲ್ಲನ್ನು ಒದಗಿಸಿದ್ದು . ಸದರಿ ಬಿಲ್ಲನ್ನು ಹಿಂಪಡೆಯುವಂತೆ ಕೋರಿದರು.<br>• ಸಣ್ಣ ನೀರಾವರಿ ಇಲಾಖೆಯಿಂದ ಪರಿವರ್ತಕವನ್ನು ಅಳವಡಿಸಿದ್ದು ಕೂಡಲೇ ಚಾಲನೆಗೊಳಿಸುವಂತೆ ಕೋರಿದರು.<br>• ಸದರಿ ಕ್ಯಾಂಪ್‌ನಲ್ಲಿ ಮಾರ್ಗದಾಳುವಾಗಿ ಕರ್ತವ್ಯ ನಿರ್ವಹಿಸುತ್ತಿದ್ದ ಶ್ರೀ.ಸಾಗರ್ ಸಿದ್ದಪ್ಪ ಒಡೆಯರ್ ರವರನ್ನು ಬಡ್ತಿ ನೀಡಿ ಬೇರೊಂದು ಸ್ಥಳಕ್ಕೆ ನಿಯೋಜಿಸಿದ್ದು, ಸದರಿ ಕ್ಯಾಂಪ್‌ನಲ್ಲಿ ಮಾರ್ಗದಾಳುವಿಲ್ಲದ ಕಾರಣ ಕೂಡಲೇ ಅವರನ್ನೆ ನೇಮಿಸುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಉತ್ತರಿಸುತ್ತ ನಿಗಮದ ನಿಯಮಾನುಸಾರ ನಮ್ಮ ಇಲಾಖಾ ವತಿಯಿಂದ ಪರಿವರ್ತಕ ಹಾಗೂ ಮಾರ್ಗದ ಕಾರ್ಯ ಪೂರ್ಣಗೊಂಡಿದ್ದು ತಾವುಗಳು ಸಮಾಜ ಕಲ್ಯಾಣ ಇಲಾಖೆಯಿಂದ ಮೋಟರ್ ಅಳವಡಿಸಿಕೊಂಡು ಉಪಯೋಗ ಮಾಡಿಕೊಳ್ಳುವಂತೆ ತಿಳಿಸಿದರು.<br>* ಸಣ್ಣ ನೀರಾವರಿ ಇಲಾಖೆಯ ಕಾರ್ಯದ ಗುತ್ತಿಗೆ ಪಡೆದ ಮೆ॥ ಚಕ್ರ ಎಲೆಕ್ಟ್ರಿಕಲ್ಸ್ ರವರಿಗೆ ಕೂಡಲೇ ಕಾರ್ಯವನ್ನು ಪೂರ್ಣಗೊಳಿಸಿ ಪರಿವರ್ತಕವನ್ನು ಚಾಲನೆಗೊಳಿಸುವಂತೆ ದೂರವಾಣಿ ಮುಖಾಂತರ ಸೂಚಿಸಿದರು.<br>* ಅಗತ್ಯ ಕ್ರಮ ಕೈಗೊಳ್ಳುವಂತೆ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿರು. |
| 9 | ಪ್ರಿನ್ಸ್ ಮೊಣ್ಣಪ್ಪ<br>ಕೊಟ್ಟೋಳಿ ಗ್ರಾಮ<br>ದೂ:9980101536 | • ಕೊಟ್ಟೋಳಿ ಗ್ರಾಮದಲ್ಲಿ ವಿದ್ಯುತ್ ತಂತಿಗಳು ಜೋತು ಬಿದ್ದಿದ್ದು ಮಧ್ಯಂತರ ಕಂಬಗಳನ್ನು ಅಳವಡಿಸಬೇಕಾಗಿಯು ಹಾಗೂ ಶಿಥಿಲಗೊಂಡ ಹಳೆಯ ಕಂಬಗಳನ್ನು ಬದಲಿಸುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಆನೆ ಕಾರಿಡಾರ್ ಯೋಜನೆಯಡಿ ಮಧ್ಯಂತರ ಅಳವಡಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯ ನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು |

| | | | |
|---|---|---|---|
| 10 | ನಂಜಪ್ಪ<br>ಬೇಟೋಳಿ ಗ್ರಾಮ<br>ದೂ:9449790189 | • ಪಾಲಂಗಾಲ ವ ಎತ್ತು ಬೇತ್ರಿ ಫೀಡರ್ ಒಂದೇ ಬ್ರೇಕರ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವುದರಿಂದ ನಮ್ಮ ಗ್ರಾಮಗಳಿಗೆ ವಿದ್ಯುತ್ ಸಮಸ್ಯೆ ಉಂಟಾಗಿರುತ್ತದೆ ಹಾಗೂ ಬೇತ್ರಿ ಫೀಡರ್‌ನ ಎ.ಬಿ ಕೆಬಲ್‌ನ ದುರಸ್ಥಿ ಕಾರ್ಯವನ್ನು ಕೂಡಲೇ ಪ್ರಾರಂಭಿಸುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಈಗಾಗಲೇ ಮಂಜೂರಾತಿ ದೊರೆತಿದ್ದು ಕೂಡಲೇ ಕಾರ್ಯ ಪ್ರಾರಂಭಿಸಲಾಗುವುದು. |
| 11 | ಎಂ.ಕೆ.ಸುಬ್ಬಯ್ಯ<br>ಐಮಂಗಲ ಗ್ರಾಮ<br>ಮತ್ತು ಅಂಚೆ | • ಸದರಿಯವರ ಆರ್.ಆರ್.ಸಂಖ್ಯೆ:VP1471. ಗೆ ಸೇವಾ ಸಂಪರ್ಕ ನೀಡಿದ್ದ ಕಂಬಕ್ಕೆ ವಾಹನವೊಂದು ಡಿಕ್ಕಿಪಡಿಸಿದ ಕಾರಣ ಅತಿ ಹೆಚ್ಚು ಬಿಲ್ಲು ಬಂದಿದ್ದು ಸರಿಪಡಿಸಿಕೊಡುವಂತೆ ಕೋರಿದರು. | * ಉತ್ತರಿಸಿದ ಅಧೀಕ್ಷಕ ಇಂಜಿನೀಯರ್ ರವರು ಈ ಪ್ರಕರಣವು ಈಗಾಗಲೇ ನ್ಯಾಯಾಲಯದಲ್ಲಿರುವುದರಿಂದ, ನ್ಯಾಯಾಲಯದ ತೀರ್ಮಾನದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದಾಗಿ ತಿಳಿಸಿದರು. |

11/10/

ಅಧೀಕ್ಷಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವೃತ್ತ,
ಚಾಮರಾಜನಗರ ಮತ್ತು ಕೊಡಗು.

ಪ್ರತಿಯನ್ನು:-

1. ಮುಖ್ಯ ಇಂಜಿನಿಯರ್(ವಿ), ಚಾವಿಸನಿನಿ., ವಲಯ ಕಛೇರಿ, ಮೈಸೂರು ರವರಿಗೆ ಸಲ್ಲಿಸಲಾಗಿದೆ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
3. ವ್ಯವಸ್ಥಾಪಕ ನಿರ್ದೇಶಕರ ಕಾರ್ಯನಿವಾಹಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
4. ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾವಿಸನಿನಿ, ಕಾ ಮತ್ತು ಪಾ ವಿಭಾಗ ಮಡಿಕೇರಿ ರವರಿಗೆ ಮಾಹಿತಿಗಾಗಿ ಹಾಗೂ ದೂರುಗಳ ಪರಿಹಾರಕ್ಕೆ ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
5. ನಿರ್ದೇಶಕರು(ತಾಂತ್ರಿಕ) ರವರ ತಾಂತ್ರಿಕ ಸಹಾಯಕರು, ಚಾವಿಸನಿನಿ., ನಿಗಮ ಕಛೇರಿ, ಮೈಸೂರು.
6. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ (ವಿ), ಚಾ.ವಿ.ಸ.ನಿ.ನಿ., ವಿರಾಜಪೇಟೆ ಉಪವಿಭಾಗ ರವರ ಮಾಹಿತಿಗಾಗಿ. ಹಾಗೂ ದೂರುಗಳ ಇತ್ಯಾರ್ಥ ಪಡಿಸಲು ಅವಶ್ಯಕ ಕ್ರಮವಹಿಸಲು ತಿಳಿಸಲಾಗಿದೆ.
7. ಹಿಆಸ/ಪ್ರಕ/ಕಡತ.